doc-32
T.P-2

Regd No M 1229 | 43rd Year | Sri 'Satyavadi' Mysore | 13—4—1959

ಪ್ರಮುಖ ವರ್ತಮಾನಗಳಿಗೆ
ಪಕ್ಷಾಣದೀಪ ...
"...
ದಿನ ...

# ಸತ್ಯವಾದಿ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸಂಸ್ಥಾಪಕರು— ಅರಮನೆ ಸಿಂಸ್ಯೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿ 3ಪೈ

## ಮದರಾಸು ಪೌರಸಭಾ ಚುನಾವಣಾ ಸ್ವಾರಸ್ಯಗಳು

ಮದರಾಸು 12—ಮದರಾಸು ಪೌರಸಭಾ ಚುನಾವಣೆಯಲ್ಲಿ, 6ವರ್ಷಗಳಿಂದ ಆಳಿತದಲ್ಲಿದ್ದ ಕಾಂಗ್ರೆಸ್ಸು ಅಧಿಕಾರ ಕಳೆದುಕೊಂಡಿತು — ಫಲಿತಾಂಶವಿದು— ದ್ರವಿಡ ಮುನ್ನೇತ್ರ ಸಂಘ 45, ಕಾಂಗ್ರೆಸ್ಸು 37, ಸ್ವತಂತ್ರರು 13, ಕಮ್ಯುನಿಸ್ಟ್ 2 ಪಿ ಎಸ್ ಪಿ 2, ಸೋಷಲಿಸ್ಟ್ 1 — ಈ ಸೂರು ಮಂದಿ ಚುನಾಯಿತರಾದ ಕಾರ್ಪೊರೇಟರುಗಳ ಪೈಕಿ 3 ಮಂದಿ ಮಹಿಳೆಯರು, 11 ಮಂದಿ ನಿಮ್ನ ವರ್ಗದವರಿದ್ದಾರೆ — 270 ವರ್ಷಗಳು ಹಳೆಯದಾದ ಮದರಾಸು ಕಾರ್ಪೊರೇಷನ್ ಈ ಸಾರಿ ಚುನಾವಣೆಯು ತೀವ್ರ ಸ್ಪರ್ಧೆ ಮತ್ತು ಚಟುವಟಿಕೆಯಿಂದ ನಡೆಯಿತು, ಡಿ ಎಂ ಕೆ ಸ್ಪರ್ಧಿಸಿದ್ದು ಇದೇ ಪ್ರಥಮ ಸಾರಿ ; ಕಾಂಗ್ರೆಸ್ ವಿರುದ್ಧ ಡಿ ಎಂ ಕೆ ಯಲ್ಲಿ ತೀವ್ರ ಹೋರಾಟ ನಡೆಯಿತು. ರಾಲಿಗಳು, ಭಾರಿಭಾರಿ ಬಹಿರಂಗ ಸಭೆ ಮನೆಮನೆಗೂ ಒಟಿನ ಬೇಟೆ ನಡೆಯಿತು.

## ಕುಡಿತಕ್ಕೆ

ಸಿಂಗಪುರ 11— ಕಳೆದ ವರ್ಷ ಮಲೆಯಾದ ಪೆರಾಕಿನಲ್ಲಿನ ಭಾರತೀಯರು 8 ಮಿಲಿಯ ಮಲಯಾ ಡಾಲರ್ (125 ಲಕ್ಷ ರೂ) ಗಳನ್ನು, ಸೆಲಾಂಗೇಗನ ಲ್ಲಿರುವವರು 6 ಮಿಲಿಯ ಮಲಯಾ ಡಾಲರ್ (93 ಲಕ್ಷ ರೂ) ಗಳನ್ನು ಖರ್ಚು ಮಾಡಿರುವುದಾಗಿ ವರದಿಯಾಗಿದೆ.

## ಡೆಲ್ಲಿ ಲಾಮಾರು

ಶಿಲಾಂಗ್ 12— ಬಾಂಡ್ಲಿಲಾಕ್ಕೆ ಡಲೈ ಲಾಮಾರು ದಯಮಾಡಿಸಿದಾಗ ವೈಭವ ಸ್ವಾಗತ ನೀಡಲಾಯಿತು — ಗುಡ್ಡಗಾಡು ಜನರ ಮನೋಹರ ನೃತ್ಯ ನಡೆಯಿತು — ಅಸ್ಸಾಂ ರೈಫಲ್ ಪಡೆಯೊಂದು ಈ ಭಾಗದಲ್ಲಿ ಬಹು ಎಚ್ಚರಿಕೆಯಿಂದ ಕಾವಲಿದೆ.

## ಭೂದಾನಕ್ಕೆ

ಹನ್ಸಿ (ಪಂಜಾಬು) 12 — ಪಂಜಾಬಿನ ಹಾನ್ಸಿ ತಹಸಿಲ್ದಿನ ಮೂಢಾ ಗ್ರಾಮದ 70 ವರ್ಷದ ಮಾತಾ ಸುಖ್‌ಬಾಯಿ ಎಂಬಾಕೆಯು ಆಚಾರ್ಯ ಭಾವೆ ರವರ ಭೂದಾನ ಚಳವಳಿಗೆ 125 ಬಿಗಾ ಜಮೀನು ಮತ್ತು 10 ಸಾವಿರ ರೂಗಳು ಬೆಲೆ ಬಾಳುವ ಮನೆಯನ್ನು ದಾನ ಮಾಡಿರುವರು.

## ತಾರಾಸಿಂಗರ ಉಪವಾಸವಿಲ್ಲ

ನವದೆಹಲಿ 12— ಮಾಸ್ಟರ್ ತಾರಾ ಸಿಂಗರನ್ನು ತಮ್ಮೊಡನೆ ಟೀ ಸೇವಿಸಲು ಪಂ|| ನೆಹರು ಆಹ್ವಾನಿಸಿದ್ದರು — 85 ನಿಮಿಷಗಳ ಕಾಲ ಇವರುಗಳ ಮಾತು ಕತೆ ನಡೆದು, ಕಡೆಯಲ್ಲಿ ಇಬ್ಬರೂ ಹೇಳಿಕೆ ಹೊರಡಿಸಲಾಗಿದ್ದು, ಪಂಜಾಬು ಗುರುದ್ವಾರಗಳ ಬಗ್ಗೆ ಸಮಿತಿ ನೇಮಿಸಲು ನಿರ್ಧರಿಸಲಾಯಿತು — ತಾರಾಸಿಂಗರು ತಾವು ತಾ|| 16 ರಿಂದ ಕೈಗೊಳ್ಳುವುದಾಗಿ ತಿಳಿಸಿದ ಆಮರಣಾಂತ ಉಪವಾಸವನ್ನು ತ್ಯಜಿಸಿದ್ದಾರೆ.

## ಮಾಸ್ಕೋ ಪ್ರವಾಸ

ಜಮ್ಮು 12— ಜಮ್ಮು ಕಾಶ್ಮೀರಿನ ಸೆದರ್ ಇ ರಿಯಸಾತ್ ಯುವರಾಜ ಲಕರಣಸಿಂಗರು ರಷ್ಯಾದಲ್ಲಿ ಪ್ರವಾಸ ನಡೆಸಲು ತಾ || 20 ರಂದು ಮಾಸ್ಕೋವಿಗೆ ಪ್ರಯಾಣ ಬೆಳಸುವರು.

## ರಷ್ಯಾ ಶಸ್ತ್ರಾಸ್ತ್ರಗಳು

ಕೈರೊ 12— ರಷ್ಯಾದ ಎರಡು ಹಡಗುಗಳು ಶಸ್ತ್ರಾಸ್ತ್ರಗಳನ್ನು ತುಂಬಿಕೊಂಡು ಸುಯೆಜ್ ಕೆನಾಲ್ ಮೂಲಕ ಇಂತಕಿಗೆ ಹೋಯಿತೆಂದು ವರದಿಯಾಗಿದೆ.

## ನಾಳೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞಶಿಖಾಮಣಿ ಸಂಪತ್ಕೃಷ್ಣಜೋಯಿಸರಿಂದ

14 ಮಂಗಳವಾರ ಷಷ್ಠಿ ಮೃ (ಬೆ 6-54)

# ಶ್ರೀ ಮಂಗಳದಾಸ್ ಪಕಾನ ಮೈಸೂರಿನ ಹಂಗಾಮಿ ಗೌರರ್

ನವದೆಹಲಿ 12— ಮೈಸೂರಿನ ರಾಜ್ಯಪಾಲರಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ವೊಡೆಯರ್ ಬಹದ್ದೂರ್‌ರವರಿಗೆ ವಿದೇಶ ಪ್ರವಾಸಕ್ಕಾಗಿ ಈ ತಿಂಗಳು ಮಧ್ಯದಿಂದ 3 ತಿಂಗಳು ರಜಾ ಕೊಡಲಾಗಿದೆಯೆಂದೂ, ಶ್ರೀ ಮಂಗಳದಾಸ್ ಪಕ್ವಾಸಾರವನ್ನು ಹಂಗಾಮಿ ಗೌರ್ನರಾಗಿ ರಾಷ್ಟ್ರಪತಿಗಳು ನೇಮಿಸಿರುವರೆಂದೂ ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸುತ್ತದೆ — ಪಕ್ವಾಸಾರವು ಮಧ್ಯಪ್ರದೇಶದ ಮತ್ತು ಬೊಂಬಾಯಿ ಗೌರ್ನರಾಗಿದ್ದರು — ಹಿಂದೆ ಶಾಸನೋಲ್ಲಂಘನ ಚಳವಳಿಯಲ್ಲಿ 3 ಸಾರಿ ಜೈಲುವಾಸ ಅನುಭವಿಸಿರುವರು.

ಬೆಳಗಾಂ 12 — ರಾಜ್ಯದ ಸಹಕಾರ ಮಂತ್ರಿ ಶ್ರೀ ಮಾಳಿ ಮರಿಯಪ್ಪನವರು ಬಂದಾಳ ಕೆಲವು ಮಹಾರಾಷ್ಟ್ರಿಯರು ಕಪ್ಪು ಭಾವುಟ ಪ್ರದರ್ಶನ ಮಾಡಿದರು.

o o

ನವದೆಹಲಿ 12 — ಪಾಕಿಸ್ತಾನವು ಹೊಡೆದುರುಳಿಸಿದ ಭಾರತ ವಿಮಾನದಲ್ಲಿದ್ದ ಇಬ್ಬರು ದೆಹಲಿಗೆ ವಾಪಸ್ಸು ಬಂದರು

o o

ಚಂಡಿಘರ 8 — ಪಂಜಾಬಿನ 9 ಮಂತ್ರಿಗಳು ಮತ್ತು 7 ಉಪಮಂತ್ರಿಗಳು 1958 ರಲ್ಲಿ ಉದ್ಘಾಟನೆ, ಅಸ್ಪೃಶ್ಯತಾ ಹಾಕುವುದು, ಭಾವಚಿತ್ರ ಅನಾವರಣ ಮುಂತಾದ 112 ಸಮಾರಂಭಗಳಲ್ಲಿ ಭಾಗವಹಿಸಿದ್ದರೆಂದು ವಿಧಾನಸಭೆಯಲ್ಲಿ ತಿಳಿಸಲಾಯಿತು.

o o

ಶ್ರೀನಗರ 11— ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರಿಂದ ಮುಜಫರಾಬಾದಿನ ಭಾಗದಲ್ಲಿ ವಿರಪುರ ಗ್ರಾಮವನ್ನು ನೌಸೇರಿಯೊಂದಿಗೆ ಸೇರಿಸುವಯುದ್ಧತಂತ್ರದ ಭಾರಿ ರಸ್ತೆಯನ್ನು ರಚಿಸಲು ಪಾಕಿಸ್ತಾನ ಸೈನ್ಯದ ಇಂಜಿನಿಯರುಗಳು ಚಟುವಟಿಕೆಯಿಂದ ಕಾರ್ಯ ತತ್ಪರರಾಗಿರುವರೆಂಬ ವರದಿ ಬಂದಿದೆ.

ದಿನ್ಹಟ (ಕೂಚ್‌ಬಿಹಾರ್) 11 — ಸುಮಾರು 300 ಮಂದಿ ಸಶಸ್ತ್ರ ಪಾಕಿಸ್ತಾನಿ ರಾಷ್ಟ್ರೀಯರು ಭಾರತಗಡಿ ನುಗ್ಗಿ ಬಾರಂಗರೋಲ್ಜಾರಾದಲ್ಲಿ ಒಂದು ಡರ್ಜ ಮನೆಗೆ ಬೆಂಕಿ ಹಚ್ಚಿ ಸುಟ್ಟರು ಅನೇಕ ಕಡೆ ಲೂಟಿ ಮಾಡಿ ಸಶಸ್ತ್ರರು ರೂಗಳ ಆಸ್ತಿಪಾಸ್ತಿ ನಷ್ಟಪಡಿಸಿದರು — 40 ದನಗಳನ್ನು ಅಪಹರಿಸಿದರು.

ವಿಷ್ಣುಶರ್ಮ ಋಷಿಯು ಪ್ರಚಲಿತ 'ಹಿತೋಪದೇಶ' ಸಂಕಲನವನ್ನು ಮಾಸ್ಕೋ ಶಿಶುಸಾಹಿತ್ಯ ಪ್ರಕಟನಾಲಯವು ರಷ್ಯಾ ಭಾಷೆಯಲ್ಲಿ ಪ್ರಕಟಿಸಿದೆ.

ಹಾಂಕಾಂಗ್ 10— ಟಿಬೆಟ್ಟು ದಂಗೆಯು 1922 ರಲ್ಲೇ ಯೋಜಿಸಲಾಗಿತ್ತೆಂದು ನ್ಯೂ ಚೈನಾ ಏಜೆನ್ಸಿ ವರದಿ ಮಾಡಿದೆ.

ಸರ್'ಗ 11 — ಭಾರತದ ಗಣಿತ ಶಾಸ್ತ್ರದ ಮಹಾ ಪ್ರತಿಭಾವಂತೆ 8 ವರ್ಷದ ಕುಮಾರಿ ಶಕುಂತಳಿತ ಇಲ್ಲಿಗೆ ಬಂದಿಡಾಳೆ.

ಬೊಂಬಾಯಿ 10— ಇಲ್ಲಿರುವ ಸುಮಾರು 20 ಸಾವಿರ ಭಿಕ್ಷುಕರು ದಿನಕ್ಕೆ 1 ರಿಂದ 7 ರೂಗಳವರೆಗೆ ಸುಖವಾದಿಸುತ್ತಿರುವರೆಂದು ಪ್ರಕಟವಾಗಿದೆ.

### ಭಾರತದ ವಿಮಾನವನ್ನು ಪಾಕಿಸ್ತಾನ ಉರುಳಿಸಿದರ ಬಗ್ಗೆ

ಸವದೆಹಲಿ 11— ಪಾಕಿಸ್ತಾನವು ಭಾರತದ ವಿಮಾನಕ್ಕೆ ಎಚ್ಚರಿಕೆಯಿಂದ ಹೊಡೆದುರುಳಿಸಿತೆಂದೂ, ಇದು ಅಂತರರಾಷ್ಟ್ರೀಯ ನ್ಯಾಯ ಮತ್ತು ಪದ್ಧತಿಗೆ ಅನುಸಾರವಾಗಿಯೂ ಮತ್ತು ವಿರೋಧವಾಗಿರುವುದೆಂದು ಭಾರತ ರಕ್ಷಣಾ ಮಂತ್ರಿ ಕೃಷ್ಣಮೆನನ್ ಲೋಕಸಭೆಯಲ್ಲಿ ತಿಳಿಸಿದರು — ಈ ಉದ್ರೇಕಗೊಳಿಸುವ ಕಾರ್ಯಕ್ಕಾಗಿ, ಭಾರತದ ವಾಯುಮಂಡಲಕ್ಕೆ ಪಾಕಿಸ್ತಾನ ವಿಮಾನಗಳು ಬಂದರೆ, ಅವುಗಳನ್ನು ಹೊಡೆದುರುಳಿಸುವುದಿಲ್ಲವೆಂದೂ ಹೇಳಿದರು.

### ಡಲ್ಲಾ ಲಾಮಾರವರು

ಈಗ ಭಾರತದಲ್ಲಿ ಆಶ್ರಯ ಪಡೆದಿರುವ ಟಿಬೆಟ್ಟಿನ ಡಲ್ಲಾ ಲಾಮಾರವರು ಮಹಾತ್ಮಾ ಗಾಂಧಿಯವರು ನಿಧನರಾದಾಗ ತುಂಬಾ ವ್ಯಸನಾಕ್ರಾಂತರಾಗಿ ತಮ್ಮ ಕೂಡಿಯು ಬಾಗಿಲನ್ನೇ ತೆಗೆಯುತ್ತ ಏನೊಂದು ಆಹಾರವನ್ನು ಸ್ವೀಕರಿಸದಿದ್ದರೆಂದು ಪ್ರಕಟವಾಗಿದೆ — ಇವರಿಗೆ ಗಾಂಧೀ ಸಾಕ್ಷ್ಯಚಿತ್ರ ನೋಡಲು ಇಚ್ಛೆಯೇ ಹೊರ್ತು, ಇತರ ವಿಷಯಗಳ ಮತ್ತು ಹಾಸ್ಯವಿನೋದಗಳ ಚಿತ್ರ ನೋಡಲು ಅಷ್ಟು ಅಭಿಲಾಷೆ ಇಲ್ಲವೆಂದೂ ತಿಳಿಯಬಂದಿದೆ.

### ಅತ್ತೆ ಕೊಂದ ಅಳಿಯ

ಬಿಜಾಪುರ 8— ಕಳೆದ ವರ್ಷ ಏಪ್ರಿಲ್ 16 ರಲ್ಲಿ ನಿಂಗಪ್ಪನೆಂಬುವನು ತನ್ನ ಅತ್ತೆಯನ್ನು ಕೊಂದಿದ್ದಕ್ಕೆ ವಿಚಾರಣೆ ನಡೆದು 10 ವರ್ಷ ಸಜೆ ವಿಧಿಸಲಾಯಿತು — ನಿಂಗಪ್ಪನು ಹುದಗುಂಡಿಯಲ್ಲಿದ್ದ ತೆತ್ತೇವನಿಗೆ ಹೋಗಿ ಅಲ್ಲಿ ಕೆಲ ದಿನಗಳಿದ್ದು, ತನ್ನ ಹೆಂಡತಿ ನಡತೆ ವಿಷಯದಲ್ಲಿ ಸಂಶಯಗೊಂಡು ಅವಳನ್ನು ತನ್ನ ಸ್ಥಳಕ್ಕೆ ಕರೆದುಕೊಂಡು ಹೋಗುವುದಾಗಿ ಅತ್ತೆಗೆ ಹೇಳಲು, ಅವಳು ಒಪ್ಪದಿರಲು ಮಚ್ಚಿನಿಂದ ಹೊಡೆದು ಕೊಂದಿದ್ದನು.

### ಹೊಸ ಶೋಧನೆ

ಶುದ್ಧ ಅಕ್ಕನಾಳಗಳು ಗಟ್ಟಿಯಾಗುವುದನ್ನು ಪತ್ತೆಮಾಡಬಲ್ಲ ಮತ್ತು ಆ ಕಾಯಿಲೆಯನ್ನು ನಿವಾರಿಸಲು ಸಾಧ್ಯವಾಗಬಹುದಾದ ವಿವರಗಳನ್ನು ಒದಗಿಸಬಲ್ಲ ಸಾಧನವೊಂದನ್ನು ಅಮೇರಿಕಾ ವಿಜ್ಞಾನಿಗಳು ಸಿದ್ಧಪಡಿಸಿದ್ದಾರೆ.

### ಮೈಸೂರು ರಾಜ್ಯಕ್ಕೆ ಸೇರಬೇಕು

ಸೊಲ್ಲಾಪುರ ನಗರದಲ್ಲಿ ಕಳೆದ ತಿಂಗಳು 21 ಮತ್ತು 22 ರಂದು ಸೊಲ್ಲಾಪುರ ಜಿಲ್ಲಾ ಕನ್ನಡಿಗರ ಪರಿಷತ್ತು ಮತ್ತು ಅಖಿಲ ಕರ್ನಾಟಕ ಗಡಿನಾಡು ಪರಿಷತ್ತು ಯಶಸ್ವಿಯಾಗಿ ನಡೆದವು — ಸೊಲ್ಲಾಪುರ ನಗರ, ದಕ್ಷಿಣ ಸೊಲ್ಲಾಪುರ ತಾಲ್ಲೂಕು, ಅಕಲಕೋಟೆ ಮತ್ತು ಜತ್ತ ಈ ಎಲ್ಲ ಪ್ರದೇಶಗಳು ಮೈಸೂರು ರಾಜ್ಯಕ್ಕೆ ಸೇರಬೇಕೆಂಬ ನಿರ್ಣಯ ಸರ್ವಾನುಮತದಿಂದ ತೀರ್ಮಾನವಾಯಿತು — ಸೊಲ್ಲಾಪುರ ಸೇರಿದ ಹೊರ್ತು ಕರ್ನಾಟಕ ಪೂರ್ಣವಾಗದು ಎಂದು ಗಣ್ಯರು ಘೋಷಿಸಿದರು — ಈ ಪರಿಷತ್ತುಗಳಲ್ಲಿ ಈಗ ಮೈಸೂರು ರಾಜ್ಯದ ಹೊರಗೆ ಉಳಿದಿರುವ ಕನ್ನಡ ಪ್ರದೇಶಗಳು. ಅಂದರೆ, ಕಾಸರಗೋಡು, ತಳಿವಾಡಿ, ಹೊಸೂರು, ಮಡಕಶಿರ, ಅದವಾನಿ, ಆಲೂರು, ರಾಯದುರ್ಗ, ಅಕ್ಕಲಕೋಟೆ, ಜತ್ತ ಸೊಲ್ಲಾಪುರ ಇತ್ಯಾದಿ ಪ್ರದೇಶಗಳೆಲ್ಲವೂ ಮೈಸೂರು ರಾಜ್ಯಕ್ಕೆ ಸೇರಬೇಕೆಂಬ ಅಭಿಪ್ರಾಯ ಒಮ್ಮುಖವಾಗಿ ಕಂಡುಬಂದಿತು ; ಬೆಳಗಾಂ, ನಿಪ್ಪಾಣಿ, ಕಾರವಾರಗಳನ್ನು ಕರ್ನಾಟಕ ಮಂತ್ರಾಟಿಗರು ಮಾಡುತ್ತಿರುವ ಚಳವಳಿ ವಿವೇಕರಹಿತವಾದುದೆಂದೂ, ದೇಶಾಭಿಮಾನರಹಿತವಾದುದೆಂದೂ, ಈ ಅಲ್ಲಿಸಲ್ಲದ ಜಟಿಲವಟಕೆಗಳಿಗೆ ಮೈಸೂರು ಸರಕಾರವೂ ಜನರೂ ಜಗ್ಗಬಾರದೆಂದೂ, ಸತ್ಯಾಗ್ರಹವು ಉಪಯುಕ್ತವಾದರೆ ಕನ್ನಡಿಗರು ಇಂತಹ ಸತ್ಯಾಗ್ರಹವನ್ನು ನಡೆಸಲು ಸಿದ್ಧರೆಂದೂ ಸಭೆಯಲ್ಲಿ ಅಭಿಪ್ರಾಯ ಕಂಡುಬಂದಿತು. (ಕ. ನು)

— ನಾಳೆ ಸೋಮವಾರ ಯುಗಾದಿ ಪ್ರಯುಕ್ತ ಪತ್ರಿಕೆ ಪ್ರಕಟವಾಗುವುದಿಲ್ಲ —


ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾ ರ್ಮ ಸಿ

ಅಶೋಕ್ ಸ್ಟಾಂಡ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

ಅಪೆರಾ— ಜಯಪ್ರದ 2 ನೇ ವಾರ

ಸಕಲರೂ ನೋಡಬೇಕಾದ ಮನೋನ್ನತ ಪೌರಾಣಿಕ ಚಿತ್ರ

ನತೀ ತುಲಸಿ ತೆಲುಗು

ಪಾತ್ರ— ಎಸ್ ವರಲಕ್ಷ್ಮಿ, ಕೃಷ್ಣಕುಮಾರಿ, ಅಮರನಾಥ್, ಗುಮ್ಮಡಿ

ಪ್ರತಿದಿನ 3 ಆಟಗಳು

ವುಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ಮಿಸ್. ಬಿ. ಫಿಲ್ಮ್ಸ್‌ರವರ

ಅನಾಡಿ

(ಹಿಂದಿ)

ತಾರಾಗಣ— ನೂರ್ಜ, ರಾಜ್ ಕಪೂರ್

ಮೋತೀಲಾಲ್, ಶುಭಾ ಖೋಟೆ

ದಿಗ್ದರ್ಶನ : ಋಷಿಕೇಷ್ ಮುಖರ್ಜಿ

ಸಂಗೀತ : ಶಂಕರ್ ಜೈಕಿಶನ್

ಬಹು ದಿನಗಳಿಂದ ಎದುರುನೋಡುತ್ತಿದ್ದ

ಈ ಚಿತ್ರವನ್ನು ನೋಡಲು ಮರೆಯಬೇಡಿ

[ ದಿನವಹಿ 3 ಪ್ರದರ್ಶನಗಳು ]

SHAKTI SUDHA

A Superb Tonic

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

| | |
|---|---|
| Casual | Rs 1-50 per inch |
| 2 insertions and above | 1-25 |
| Contract above 100 inches | 1-00 |
| 500 | 0-75 |

Column length 12½ inches; width 2 inches; 4 columns to a page.

The decision of the management is final in all matters.

Manager "Satyavadi", Chamarajpuram, Mysore


Edited, Printed & Published by Dharma Prachara Nayaka M. Krishna Rao, at the Satyavadi Press Chamarajapuram, Mysore